# ಸರಳತೆಯನ್ನೇ ಶುಭಲಗ್ನವೆನ್ನಿ

ಮನುಷ್ಯನ ಸೃಷ್ಟಿಕ್ರಿಯೆ ಮುಂದುವರಿಕೆಗೆ ಗಂಡು ಹೆಣ್ಣು ಮಿಲನ ಅನಿವಾರ್ಯ. ಮದುವೆ ಎಂಬ ಬಂಧನ ಅದಕ್ಕಾಗಿ ಮೂಡಿಬಂತು. ಆದರೆ ಇದು ಸೃಷ್ಟಿಕ್ರಿಯೆಗೆ ಮಾತ್ರ ಸೀಮಿತವಲ್ಲ, ಎರಡು ಭಿನ್ನ ಮನೋಭಾವಗಳು ಏಕೀಭವಿಸಿ ಸಾಗಬೇಕಾದ ಸುಖಸಂಸಾರಕ್ಕೆ ನಾಂದಿ ಈ ಮದುವೆ. ಒಂದರ್ಥದಲ್ಲಿ ಗಂಡು ಹೆಣ್ಣು ಇಬ್ಬರೂ ಇಲ್ಲಿ ಅರ್ಧನಾರೀಶ್ವರರರು. ಹಾಗಾಗಿ ಹೆಣ್ಣಿರಲಿ, ಗಂಡಿರಲಿ ಅವರ ಬಾಳಪಥದಲ್ಲಿ ಮದುವೆ ಎಂಬುದು ಒಂದು ಪ್ರಮುಖಘಟ್ಟ. ಪರಸ್ಪರರು ಪ್ರಬುದ್ಧ ವಯಸ್ಸು ತಲುಪಿದ ಸಂದರ್ಭದಲ್ಲಿ ನಡೆಯುವ ಈ ಮದುವೆಗೆ ನೆಂಟರಿಷ್ಟರು, ಆಪ್ತರು ನೆರೆದು ಸಾಕ್ಷಿಯಾಗುತ್ತಾರೆ. ವಿಶ್ವದೆಲ್ಲೆಡೆ ಅವರವರ ಆಚಾರಗಳಿಗೆ ಅನುಸಾರವಾಗಿ ಮದುವೆಗಳು ಅನೂಚಾನವಾಗಿ ನಡೆಯುತ್ತ ಬಂದಿವೆ.

ಸಿರಿವಂತರು ಮದುವೆಗಳನ್ನು ಅದ್ದೂರಿಯಾಗಿ ಏರ್ಪಡಿಸಿದರೆ, ಬಡವರ ಮದುವೆ ತೀರಾ ಸರಳ. ಎಷ್ಟೋ ಬಾರಿ ಅವು ಗುಡಿಗುಂಡಾರಗಳಲ್ಲಿ ನಡೆದುಹೋಗಿಬಿಡುತ್ತವೆ. ಆರಕ್ಕೆ ಏರದ, ಮೂರಕ್ಕೆ ಇಳಿಯದ ಮಧ್ಯಮ ವರ್ಗದವರ ಮದುವೆ ಅವರ ಆರ್ಥಿಕ ಯೋಗ್ಯತಾನುಸಾರ ನಡೆಯುತ್ತದೆ. ಆದರೆ ಪ್ರತಿಷ್ಠೆಗೆ ಕಟ್ಟುಬಿದ್ದು ಅದ್ದೂರಿ ಮದುವೆ ನಡೆಸಿದ ಕೆಲವರು ಅದರ ಫಲವನ್ನು ಜೀವಮಾನವಿಡೀ ಉಂಡಿದ್ದಾರೆ! ಮದುವೆಗೆ ಮಾಡಿದ ಸಾಲ ತೀರಿಸಲೆಂದೇ ಸಾಯುವವರೆಗೆ ಧಣಿಗಳ ಮನೆಯಲ್ಲಿ ದುಡಿದ ಎಷ್ಟೋ ಬಡಕುಟುಂಬಗಳಿವೆ. ಸಾಲಸೋಲದಲ್ಲೇ ಬದುಕು ಸವೆಸಿದ ಮಧ್ಯಮ ವರ್ಗವಿದೆ. ಆದ್ದರಿಂದಲೇ ಸಮಾಜ ಸುಧಾರಕರು ಕಾಲಕಾಲಕ್ಕೆ ಸರಳ ವಿವಾಹದ ಅಗತ್ಯತೆಯನ್ನು ಪ್ರತಿಪಾದಿಸುತ್ತಲೇ ಬಂದಿದ್ದಾರೆ. 'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ...' ಎಂದರು ಬಸವಣ್ಣನವರು. 'ಭಕ್ತಿ ರತಿಯೆಂಬ ಮದುವೆಗೆ... ಪುಷ್ಪ ಜಾತಿಗಳೆಲ್ಲ ನಿಬ್ಬಣವ ಬನ್ನಿರೆ...' ಎಂದು ಸಾಮೂಹಿಕ ವಿವಾಹ ಪದ್ಧತಿಗೂ ಅವರು ನಾಂದಿ ಹಾಡಿದರು.

ಸಮಾಜ ಪ್ರಗತಿ ಪಥದಲ್ಲಿ ಸಾಗಬೇಕು. ಅಂಧಾಚರಣೆಗಳು ನಿಲ್ಲಬೇಕು. ಜಾತಿಯೆಂಬ ವಿಷದ ಬೇಲಿಯನ್ನು ಕಿತ್ತುಹಾಕಬೇಕು ಎಂಬ ಧೋರಣೆಗಳು ಬಲವಾಗಿ ಪ್ರತಿಪಾದನೆಯಾಗುತ್ತಿರುವ ಈ ಆಧುನಿಕ ಕಾಲದಲ್ಲಿ ಇನ್ನೊಂದೆಡೆ ಮದುವೆಗಳು ಅದ್ದೂರಿಯಾಗಿ ನಡೆಯುತ್ತಿರುವುದು ವಿಪರ್ಯಾಸ.

ಮದುವೆ ಸರಳವಾಗಿರಬೇಕೆ? ಅದ್ದೂರಿಯಾಗಿರಬೇಕೆ? ಎಂಬುದು ಅವರವರಿಗೆ ಬಿಟ್ಟ ವಿಚಾರ ಇರಬಹುದು. ಆಹ್ವಾನ ಪತ್ರವೊಂದಕ್ಕೆ ಏಳೆಂಟು ಸಾವಿರ ಖರ್ಚು ಮಾಡುವ ಅಂದಾದುಂದಿ, ಬಾಜಾ ಭಜಂತ್ರಿ ನೋಡುವವರ ಕಣ್ಣಿಗೆ ಅಸಹ್ಯಕರವಾಗಿ ಕಾಣುತ್ತದೆ. ಸೂಕ್ಷ್ಮ ಸಂವೇದನಾ ಮನಸ್ಥಿತಿಯವರಿಗೆ ವೈಭವೋಪೇತ ಮದುವೆಗಳು ಹೇಸಿಗೆ ಹುಟ್ಟಿಸುತ್ತವೆ. ಅಷ್ಟಕ್ಕೂ ಈ ಅದ್ದೂರಿ ಮದುವೆ ಯಾಕಾದರೂ ಬೇಕು? ಕಡಿವಾಣ ಹಾಕಿಕೊಳ್ಳಬೇಕಾದವರು ಅವರವರೇ ಆದರೂ, ಈ ಕುರಿತ ಒಂದು ಚಿಂತನೆ ನಡೆಯಲಿ ಎಂಬ ಕಾರಣಕ್ಕೆ ಕರ್ನಾಟಕ ರಾಜ್ಯ ಸರ್ಕಾರವೇ ಈಗ ಮುಂದಾಗಿದೆ.

ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ಹಾಗೂ ಐದು ಲಕ್ಷಕ್ಕಿಂತ ಹೆಚ್ಚು ವೆಚ್ಚ ಮಾಡುವ ಮದುವೆಗಳನ್ನು ಐಷಾರಾಮಿ ಎಂದು ನಿರ್ಧರಿಸಿ ತೆರಿಗೆ ವಿಧಿಸಬೇಕು ಎಂದು ಆಲೋಚಿಸಿರುವುದೇ ಈ ಹೊಸ ಚಿಂತನೆ. ಇಂತಹದೊಂದು ಪದ್ಧತಿ ಈಗಾಗಲೇ ಕೇರಳದಲ್ಲಿ ಜಾರಿಯಲ್ಲಿದೆ. ಐನೂರಕ್ಕಿಂತ ಹೆಚ್ಚು ಜನ ಭಾಗವಹಿಸಿದ್ದರೆ ಆ ಮದುವೆ ಏರ್ಪಡಿಸಿದವರು ಸರ್ಕಾರಕ್ಕೆ ಅಲ್ಲಿ ತೆರಿಗೆ ಕೊಡಬೇಕು. ಕೇರಳದಲ್ಲಿ ಐನೂರು ಜನಕ್ಕೆ ಮಾತ್ರ ತೆರಿಗೆ ವಿನಾಯಿತಿ ಎಂದಿದ್ದರೆ, ನಮ್ಮಲ್ಲಿ ಅದನ್ನು ಬೇಕಿದ್ದರೆ ಸಾವಿರ ಮಾಡೋಣ ಎಂಬುದು ಕಾನೂನು ಸಚಿವರ ಅನಿಸಿಕೆಯಾಗಿದೆ. ಅದ್ದೂರಿ ಮದುವೆಗಳಲ್ಲಿ ವಸೂಲಿಯಾಗುವ ತೆರಿಗೆಯನ್ನು ಪ್ರತ್ಯೇಕವಾಗಿ ತೆಗೆದಿರಿಸಿ ಅದನ್ನು 'ಮಾಂಗಲ್ಯ ನಿಧಿ' ಎಂದು ಕರೆಯಬಹುದಾಗಿದೆ. ಬಡವರಿಗೆ, ಸಾಮೂಹಿಕ ವಿವಾಹಗಳಿಗೆ ಸರ್ಕಾರ ಈಗಾಗಲೇ ನೀಡುವ ಪ್ರೋತ್ಸಾಹದ ಮೊತ್ತಕ್ಕೆ ಈ ತೆರಿಗೆ ಸಂಗ್ರಹದ ಮೊತ್ತವನ್ನೂ ಸೇರಿಸಬಹುದಾಗಿದೆ ಎಂಬದು ಸರ್ಕಾರದ ಚಿಂತನೆಯಾಗಿದೆ.

ಸರ್ಕಾರದ ಈ ಆಲೋಚನೆ ಒಳ್ಳೆಯದೇ. ಈ ಬಗ್ಗೆ ಸಾರ್ವಜನಿಕರಲ್ಲಿ ಸಾಕಷ್ಟು ಚರ್ಚೆ ನಡೆಯಲಿ. ಜನತೆ ಒಪ್ಪಿದರೆ ಮಾತ್ರ ಈ ಕಾಯ್ದೆ ಜಾರಿಗೆ ತರಲಾಗುವುದು ಎಂದು ಸರ್ಕಾರ ಬಯಸಿದೆ. ಅದೂ ಕೂಡ ಒಳ್ಳೆಯದೇ. ಯಾಕೆಂದರೆ ಸರಳ ವಿವಾಹ ತಮಗೆ ತಾವೇ ಹಾಕಿಕೊಳ್ಳಬೇಕಾದ ನೀತಿಸಂಹಿತೆ. ಮದುವೆಯ ನೆಪದಲ್ಲಿ ವೃಥಾ ಖರ್ಚಿನ ಅಗತ್ಯ ಏನಿದೆ ಎಂಬ ಭಾವನೆ ಮೊದಲು ಸಾರ್ವಜನಿಕರಲ್ಲಿ ಮೂಡಬೇಕು. ಅನಗತ್ಯವಾಗಿ ವೆಚ್ಚ ಮಾಡುವ ಹಣವನ್ನು ಬಡಬಗ್ಗರಿಗೆ ದಾನ ಮಾಡೋಣ. ಪುಸ್ತಕ ಪ್ರಕಟನೆಗಳಿಗೆ, ಸಂಗೀತ, ಚಿತ್ರಕಲೆ, ನಾಟಕ ಪ್ರದರ್ಶನಗಳಿಗೆ ಪ್ರಾಯೋಜನೆ ಮಾಡೋಣ ಎಂಬ ಮನೋಭಾವ ಜನತೆಯಲ್ಲಿ ಮೂಡಬೇಕು. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು ಸರಳ ವಿವಾಹದ ಅಗತ್ಯವನ್ನು ಜನಸಾಮಾನ್ಯರಲ್ಲಿ ಮನಗಾಣಿಸಬೇಕು. ಅನಗತ್ಯ ವೆಚ್ಚ ಅಸಹ್ಯಕರ, ಇದೊಂದು ಅಪರಾಧ ಎಂಬ ನಾಚಿಕೆ ನಾಗರಿಕರಲ್ಲಿ ಮೂಡಬೇಕು.

■ **ಗುಡಿಹಳ್ಳಿ ನಾಗರಾಜ**

**ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ಹಾಗೂ ಐದು ಲಕ್ಷಕ್ಕಿಂತ ಹೆಚ್ಚು ವೆಚ್ಚ ಮಾಡುವ ಮದುವೆಗಳನ್ನು ಐಷಾರಾಮಿ ಎಂದು ಪರಿಗಣಿಸಿ ತೆರಿಗೆ ವಿಧಿಸಬೇಕು. ತೆರಿಗೆಯಿಂದ ವಸೂಲಾದ ಹಣವನ್ನು 'ಮಾಂಗಲ್ಯ ನಿಧಿ' ಎಂದು ತೆಗೆದಿರಿಸಿ ಸಾಮೂಹಿಕ ವಿವಾಹ ಏರ್ಪಡಿಸುವವರಿಗೆ ನೀಡಬೇಕು ಎಂಬುದು ರಾಜ್ಯ ಸರ್ಕಾರದ ಚಿಂತನೆಯಾಗಿದೆ.**

